# ಪ್ರೇಮದ ಹರಿಕಾರ



**ಭ್ರಮೆಯ ಬಲೂನುಗಳಿಗೆ ಸತ್ಯದ ಸೂಜಿಮೊನೆಯನ್ನು ಚುಚ್ಚುವ ಬುದ್ಧ, ತಾನು ಇದ್ದಲ್ಲೆಲ್ಲ ಕರುಣೆಯನ್ನು ಪಸರಿಸಿದವನು. ವಿಶ್ವಕಂಡ ಈ ಅಪೂರ್ವ ಮಾನವತಾವಾದಿಯ ನೆನೆಯಲೊಂದು ನೆಪ 'ಬುದ್ಧಪೂರ್ಣಿಮೆ' (ಮೇ 7).**

**■ ಎ. ರಾಮು**



ಮತ್ತೆ ಮತ್ತೆ ಮಾತನಾಡುವ ವ್ಯಕ್ತಿಯನ್ನು ಬುದ್ಧಿವಂತ ಎಂದು ಕರೆಯುವುದು ಸಾಧ್ಯವಿಲ್ಲ. ಆ ವ್ಯಕ್ತಿ ಸತ್ಯಮಾರ್ಗದಲ್ಲಿದ್ದು, ನಿರ್ಭೀತನಾಗಿದ್ದು, ಪ್ರೇಮ ಹಾಗೂ ಶಾಂತಿಯನ್ನು ಹೊಂದಿದ್ದಲ್ಲಿ ಬುದ್ಧಿವಂತ ಎನ್ನಬಹುದು.

***

ಅಗತ್ಯ ಇರುವವರಿಗೆ ಸಹಾಯ ಮಾಡಲು ನಾವು ವಿಫಲರಾದರೆ, ನಮ್ಮನ್ನು ಯಾರು ತಾನೆ ನೋಡಿಕೊಳ್ಳುತ್ತಾರೆ?

***

ನಿನ್ನ ಅಹಂ ಅನ್ನು ಸಡಿಲ ಉಡುಗೆಯಂತೆ ಧರಿಸಿಕೊ.

***

ನಿನ್ನ ಬಳಿ ಕಡಿಮೆ ಇದ್ದಾಗಲೂ ನೀಡು.

***

ಮೇಲಿನ ಸಾಲುಗಳು ಯಾರವು ಎಂದು ಹೇಳುವುದಕ್ಕೆ ಹೆಚ್ಚು ಕಷ್ಟವೇನೂ ಬೇಡ. ಜಗದಳುವೆಲ್ಲ ನನಗಿರಲಿ ಎಂದು ಭಾವಿಸಿದ, ಅನ್ಯರ ಸಂಕಟಗಳ ಶಮನಗೊಳಿಸುವುದನ್ನೇ ತನ್ನ ಜೀವನದ ಗುರಿಯನ್ನಾಗಿಸಿಕೊಂಡ ಬುದ್ಧನ ಮಾತುಗಳಿವು. ಆಸೆಯಲ್ಲಿನ ಕೇಡನ್ನು ಗುರ್ತಿಸಿದ ಬುದ್ಧ, ಪ್ರೇಮದ ರಾಯಭಾರಿಯಾಗಿ ನಮ್ಮೊಂದಿಗಿದ್ದಾನೆ.

ಬುದ್ಧನ ಮೇಲಿನ ಮಾತುಗಳನ್ನು ಗಮನಿಸಿ. ಆ ಮಾತುಗಳು ಇಂದಿನ ಸಂದರ್ಭಕ್ಕೆ, ನಮ್ಮನ್ನು ಉದ್ದೇಶಿಸಿಯೇ ಹೇಳಿರುವಂತಿವೆ. ಹೇಳಿಕೇಳಿ ಮಾತುಗಾರಿಕೆಯ ಕಾಲವಿದು. ಮಾತಿನ ಬಗ್ಗೆ ಇದ್ದ ಆತಂಕ ಹಾಗೂ ಸಂಕೋಚಗಳು ಮಾಯವಾಗಿ, ಮಾತು ಒಂದು ಆಯುಧದಂತೆ ಬಳಕೆಯಾಗುತ್ತಿರುವ ಸಂದರ್ಭವಿದು. ಒಬ್ಬ ಇನ್ನೊಬ್ಬನನ್ನು ಹಳಿಯಲೀಗ ಬಲ ಬೇಕಿಲ್ಲ; ಮಾತಿನಿಂದಲೇ ಮನಸ್ಸುಗಳನ್ನು ಒಡೆಯುತ್ತಿರುವ, ವ್ಯಕ್ತಿಯನ್ನು ದೀನನನ್ನಾಗಿಸುತ್ತಿರುವ 'ಮಾತುಗಾರ'ರ ದಿನಗಳಿವು. ಮಾತು ಬಲ್ಲವ ಬುದ್ಧಿವಂತನಂತೆ ಲೋಕದ ಕಣ್ಣಿಗೆ ಕಾಣಿಸುತ್ತಿದ್ದಾನೆ. ಬಹುಶಃ ಇಂತಹ ಮಾತುಗಾರರನ್ನು ಬುದ್ಧನೂ ಕಂಡಿರಬೇಕು. ಆ ಕಾರಣದಿಂದಲೇ ಆತ ಸತ್ಯಮಾರ್ಗ, ಪ್ರೇಮ, ನೆಮ್ಮದಿ ಹಾಗೂ ನಿರ್ಭೀತಿಗಳನ್ನು ಬುದ್ಧಿವಂತಿಕೆಯ ಗುಣಗಳನ್ನಾಗಿ ಹೇಳುತ್ತಾನೆ. ಬುದ್ಧಮಾರ್ಗದ ಬುದ್ಧಿವಂತನ ಅಂತರಂಗದಲ್ಲಿ ಅಹಂ ಇರಲಿಕ್ಕೆ ಸಾಧ್ಯವೇ? ಒಂದು ವೇಳೆ, ಆ ಅಹಂ ಇದ್ದಲ್ಲಿ ಅದು ಯಾವಾಗ ಬೇಕಾದರೂ ಕಳಚಿಕೊಳ್ಳಬಹುದಾದ ಉಡುಪಿನ ರೀತಿಯಲ್ಲಿರಲಿ ಎನ್ನುವುದು ಬುದ್ಧನ ಮಾತಿನ ಇಂಗಿತ.

ನೆರವಿನ ಕುರಿತು ಬುದ್ಧ ಹೇಳುವ ಮಾತುಗಳು ಕೊರೊನಾ ಸಂದರ್ಭದಲ್ಲಿ ಹೊಸ ಅರ್ಥಗಳನ್ನು ಪಡೆಯುವಂತಿವೆ. ಇರುವುದನ್ನು ಹಂಚಿಕೊಂಡು ತಿನ್ನಬೇಕಾದ ಕಾಲವಿದು. ಬಹು ಅಪರೂಪಕ್ಕೆ ನಮ್ಮೊಳಗನ್ನು ನೋಡಿಕೊಳ್ಳುವಂತಹ ಒಂದು ಅವಕಾಶ ದೊರೆತಿರುವ ಇಂದಿನ ಸಂದರ್ಭ ಬುದ್ಧನ ಮುಖಾಮುಖಿಗೆ ಹೇಳಿಮಾಡಿಸಿದಂತಹದ್ದು.

ಬುದ್ಧನ ಮುಖವನ್ನು ಗಮನಿಸಿ. ಮುಗ್ಧತೆಯೇ ಮೈದಾಳಿದಂತಹ ಮೊಗದಲ್ಲಿ ಕರುಣೆಯ ಕೊಳಗಳಂತಹ ಕಣ್ಣುಗಳು. ಆ ಕರುಣೆ ಭಾವುಕತೆಯ ರೂಪದ್ದಲ್ಲ; ಅದು ಜಗದ ದುಃಖವನ್ನೆಲ್ಲ ತೊಡೆಯುವಂತಹ ಮದ್ದಿನ ರೂಪದ್ದು. ಅಹಿಂಸೆ, ವಿಶ್ವಭ್ರಾತೃತ್ವ, ಸಹಾನುಭೂತಿ, ಅನುಕಂಪ, ಕರುಣೆ – ಇವೆಲ್ಲ ಬುದ್ಧನ ಸ್ಮರಣೆ ಮಾತ್ರದಿಂದಲೇ ನಮ್ಮೊಳಗೆ ಸ್ಫುರಿಸುವ ಗುಣಗಳು. 'ಬುದ್ಧ ಪೂರ್ಣಿಮೆ' (ಮೇ 7) ದಿನ ನಾವು ಹಂಬಲಿಸಬೇಕಾದುದು ಈ ಗುಣಗಳನ್ನೇ. ■